■ ಪದ್ಮಿನಿ ನಾಗರಾಜು
ಕಲೆ: ಸಂತೋಷ್ ಸಸಿಹಿತ್ಲು



ಕನಕಮಾಲ ಸತ್ತರಂತೆ. ಊರ ತುಂಬಾ ಈ ಸುದ್ದಿ ತಿಪ್ಪೆಗೆ ಬೆಂಕಿ ಬಿದ್ದಂತೆ ಹಬ್ಬಿದಾಗ ಊರು ಇನ್ನೂ ಜೂಕಡಿಸುತ್ತಿತ್ತು. ಆಕಾಶದಲ್ಲಿ ಅದೇ ತಾನೇ ಹೊಳೆಯುತ್ತಿದ್ದ ಚುಕ್ಕಿ ಕಂಡ ಅರೆ ಗಳಿಗೆಗೆ ಸತ್ತ ಸುದ್ದಿ ಹಬ್ಬಿ ಸುತ್ತಮುತ್ತಲಿನ ಮನೆಗಳವರು ಸತ್ತವರ ಮೊಖನೂ ನೋಡಬೇಕು, ಕರಾವು–ಹೊಲಾನೂ ಮಾಡಬೇಕು ಅಂತ ನೀರ ಒಲೆಗೆ ತೆಂಗಿನಮಟ್ಟೆ ಹಚ್ಚಿ ನೀರು ಕಾಯಿಸಲಾರಂಭಿಸಿದರು. ಹೆಣ ನೋಡಿ ಬತ್ತಿದ್ದಂಗೆ ನಾಕು ಚೊಂಬು ಮೈಮೇಲೆ ಹಾಕಿಕೊಳ್ಳೋಣ ಅಂತ ಒಲೆಗೆ ಮಟ್ಟೆ ಚೆಪ್ಪು ಹಾಕ್ತಿದ್ದಂಗೆ ಎಲ್ಲರ ಮನೆ ಪೈಪಿನಿಂದಲೂ ಕಾರ್ಖಾನೆಯ ಹೊಗೆ ಎದ್ದಂಗೆ ಬುಸುಬುಸು ಹೊಗೆ ಎದ್ದೇಳ್ತು.

ಮನೆ ಬಾಗಿಲಿಗೆ ನೀರು ಹಾಕುವ ನೆಪದಲ್ಲಿ ಹೊರಬಂದ ಹೆಂಗಸರು,

‘ಆಯಮ್ಮ ಹುಷಾರಿಲ್ಲ ಅಂದ ಎಲ್ಡೆ ವಾರಕ್ಕೆ ಸತ್ತೆ ಹೋಯ್ತಲ್ಲಕ್ಕ.’

‘ಕನಕಮ್ಮ ಒಳ್ಳೆ ಹೆಂಗಸು ಯಾರ ಉಸಾಬರಿಗೂ ಹೋದವಳಲ್ಲ ತಗೋ.’

‘ಏನೇ ಆಗಲಿ ಇತ್ತೀಚೆಗೆ ಮೈಯಲ್ಲಿ ಪಾವು ರಕುತನೂ ಇರಲಿಲ್ಲ ಅಂತೀನಿ.’

‘ಹಾಸನಕ್ಕೆ ಹೋಗಿ ಡ್ರಿಪ್ಪು ಹಾಕಿಸಿಕೊಂಡು ಬರೋರು... ನಾನೇ ನೋಡೀನಿ.’

‘ಇನ್ನ ಆ ಬ್ರಹ್ಮಸೂರಣ್ಣನ್ನ ನೋಡೋರು ಯಾರು ಅಂತೀನಿ.’

‘ಬಾಯಿಗೇ ಹೊಡೆದಿತ್ತಂತೆ ಲಕ್ವಾ ಕಣಕ್ಕಾ...’

ಹೀಗೆ ಹೆಂಗಳೆಯರು ತಮ್ಮ ತಮ್ಮ ಮಡಿಲಲ್ಲಿದ್ದ ವಿಷಯಗಳನ್ನ ಹೊರ ಹಾಕಲಾರಂಭಿಸಿದರು.

‘ಹೀಗೆ ಹೋಗಿ ಬರಾನೇನಕ್ಕಾ? ಆಮ್ಯಾಕಾ?’

‘ಗಂಡಸ್ರು ಎದ್ದೇಳದ್ರಲ್ಲಿ ಹೋಗಿ ನೋಡಕಂಡು ಬಂದುಬಿಡೋಣ ಬಾ... ಇಲ್ಲ ಅಂದ್ರೆ ಅವರ ಮನೆತಕ್ಕೆ ಯಾಕೆ ಹೋಗಿದ್ದೆ ಅಂತ ಕೂಗಾಡ್ತನೆ.’

‘ಅಮ್ಯಾಕೆ ಹೋಗಿ ಬರಾಕೆ ಆಗಕಿಲ್ಲ. ಕರಾವು ಬಿಡಬೇಕು. ಹಾಲು ಡೈರಿಗೆ ಹಾಕಬೇಕು. ನಿಂಗಿಲ್ವವಾ?’

‘ಹೇ... ನಮ್ಮ ಎಮ್ಮೆ ಗಬ್ಬ ಆಗಾದೆ. ನಿಂಗೆ ಹೇಳದೆ ಮರತಿದ್ದೆ.’

‘ಎಲ್ಲಾ ಬಂದಿರಬೇಕು. ಒಪ್ಪ ಯಾವಾಗಂತೆ?’

‘ಅದೇ... ನಾನು ಕಾಣೆ... ಮಗಳು ಬಂದವಳಲ್ವಾ... ಇನ್ನೇನು ಮಾಡಾರು.’

‘ಒತ್ತುಮುಂಚೆ ಆದ್ರೆ ಬಸದಿಲೂ ಪೂಜೆ ಮಾಡಾರು.’

ಅವರ ಮಾತುಗಳಿಗೆ ಬ್ರೇಕು ಹಾಕುವಂತೆ ಊರೊಳಗೆ ಒಂದರ ಹಿಂದೆ ಒಂದು ಕಾರು ಬರಲಾರಂಭಿಸಿದವು. ಮಾಡುವ ಕೆಲಸ ಬಿಟ್ಟು ಕನಕಮ್ಮನ ಸಾವಿನ ಸುತ್ತ ಸುತ್ತುತ್ತಿದ್ದ ಮಾತುಗಳು ಸ್ವಲ್ಪ ವಿಸ್ತಾರಗೊಂಡು ‘ಮೈಸೂರಿನ ಬೀಗರಲ್ವಾ? ಇವಳು ತಂಗಿ ಮಗಳಲ್ವಾ?’ ಹೀಗೆ ಮಾತು ಜೊತೆಯಾದವು.

ದೇವೆಹಳ್ಳಿಯ ಈ ಸಾವು ಎಷ್ಟೋ ವರ್ಷದಿಂದ ಈ ಊರಿಗೆ ಬಾರದವರೆಲ್ಲಾ ಕಾಲಿಡುವಂತೆ ಮಾಡಿತ್ತು. ಕನಕಮ್ಮ ಈ ಕುಗ್ರಾಮಕ್ಕೆ ಪಕ್ಕದ ಕಡದರಳ್ಳಿಯಿಂದ ಮದುವೆಯಾಗಿ ಬಂದಾಗ ಹದಿನೇಳರ ಪೋರಿ. ಬ್ರಹ್ಮಸೂರಿಗಿದ್ದ ಮೂರೆಕೆರೆ ಹೊಲ, ಹಿರಿಯರಿಂದ ಬಂದ ಕಾಡಂಚಿನ ಮನೆ ಇಷ್ಟೇ ಆಸ್ತಿ ನೋಡಿ ಹುಡುಗ ಸಭ್ಯಸ್ಥ, ಹೇಗೋ ದುಡಿದು ಮನೆ ನಡೆಸ್ತಾನೆ ಅಂತ ಮದುವೆ ಮಾಡಿಕೊಟ್ಟಿದ್ದರು. ಕನಕಮ್ಮನ ತವರು ಬಡತನದ್ದೇ. ನಾಲ್ಕು ಮಕ್ಕಳಲ್ಲಿ ಅಣ್ಣ–ತಮ್ಮನ ಮಧ್ಯೆ ಇದ್ದ ಆಕೆ ಅಲ್ಲಿ ಸಗಣಿ ಬಾಚಿ, ಕರಾವು ನೋಡಿಕೊಂಡಂತೆ, ಈ ಮನೆಯನ್ನೂ ಅದೇ ಅಕ್ಕರೆಯಿಂದ ನೋಡಿಕೊಂಡಿದ್ದಳು. ಇದ್ದ ಅಣ್ಣ ಸತ್ತ ಮೇಲೆ ಅವಳಿಗೆ ತವರಿನಲ್ಲಿದ್ದದ್ದು ಅವಳ ತಮ್ಮ ಕಾಂತಣ್ಣನೇ.

ಅದ್ಯಾವಾಗಲೋ ಒಮ್ಮೆ ಹಾಸನದಿಂದ ಶಿಖರ್ಜಿ ಯಾತ್ರೆಗೆ ಹೊರಡಿಸಿದ ಬಸ್ಸಿನಲ್ಲಿ ಅಡುಗೆ ಮಾಡುವ ಧರಣೇಂದ್ರನಿಗೆ ಸಹಾಯಕ್ಕೆ ಅಂತ ಹೋದ ಕಾಂತರಾಜು ಕೆಲವೇ ವರ್ಷಗಳಲ್ಲಿ ಪ್ರಸಿದ್ಧ ಅಡುಗೆ ಭಟ್ಟನಾದ. ಸುತ್ತಲ ಮದುವೆ–ಮುಂಜಿ, ಯಾತ್ರೆ, ಪಂಚಕಲ್ಯಾಣಗಳಿಗೆ ಕಾಂತಣ್ಣನಲ್ಲದೆ ಬೇರೆಯವರನ್ನು ಊಹಿಸಿಕೊಳ್ಳಲೇ ಸಾಧ್ಯವಿಲ್ಲದಾಯಿತು. ಕಾಂತಣ್ಣನ ಡೇಟ್ ಸಿಕ್ಕ ಮೇಲೆ ಛತ್ರ ಬುಕ್ ಮಾಡುವ ತನಕವೂ ಅವನ ಕೈರುಚಿ ಪ್ರಸಿದ್ಧಿಯಾಗಿತ್ತು. ಅದಷ್ಟೇ ಅಲ್ಲದೆ ಎಷ್ಟೇ ಜನ ಬರಲಿ ಹೊಂದಿಸುವ, ತಕ್ಷಣಕ್ಕೆ ಏನಾದರೂ ಮಾಡಿ ಹಾಕಿ ಸೈ ಎನಿಸಿಕೊಳ್ಳುವ ಅವನ ಜಾಣತನಕ್ಕೆ ಅವನು ಕೇಳಿದ್ದಕ್ಕಿಂತಲೂ ಹೆಚ್ಚಿಗೆ ದುಡ್ಡು ಕೊಟ್ಟು ಕರೆದವರು ಸಂತೃಪ್ತಿಗೊಳ್ಳುತ್ತಿದ್ದರು. ಅಂತಹ ಕಾಂತಣ್ಣ ತನ್ನ ತಂಗಿ ತನ್ನ ಕಣ್ಣಮುಂದೆಯೇ ಶವವಾಗಿ ಮಲಗಿರುವುದನ್ನು ನೋಡಲಾಗದೆ ದೂರದ ಕಟ್ಟೆಯ ಮೇಲೆ ಟವಾಲೊಂದನ್ನು ಕಟ್ಟಿಕೊಂಡು ಆಗಾಗ ಸುರಿಯುತ್ತಿದ್ದ ಕಣ್ಣೀರನ್ನು, ಗೊಣ್ಣೆಯನ್ನೂ ಸೀಟಿಕೊಳ್ಳುತ್ತಾ ಮೌನವಾಗಿ ಕುಳಿತಿದ್ದ.

ಆ ಊರಲ್ಲಿ ಇದ್ದದ್ದು ಹತ್ತೋ ಹದಿನೈದೋ ಜೈನರ ಮನೆ ಮಾತ್ರ. ಅಲ್ಲಿ ಪುಟ್ಟ ಬಸದಿಯೂ ಇದ್ದು, ಆದಿನಾಥರ ಕಪ್ಪುಶಿಲೆಯ ಮೂರ್ತಿ ಪಕ್ಕದಲ್ಲಿ ಜ್ವಾಲಮಾಲಿನಿ,